ಅನೇಕ ಹಳ್ಳಿಗಳಲ್ಲಿ ಮರ ಕಡಿಯಲು ಪರವಾನಗಿ ಪಡೆದ ಅಲಹಾಬಾದ್‌ನ ಗುತ್ತಿಗೆದಾರರು, ಹಳ್ಳಿಗರ ವಿನೂತನ ಪ್ರತಿಭಟನೆ ಮತ್ತು ಒಗ್ಗಟ್ಟನ್ನು ನೋಡಿ ಕಾಲುಕಿತ್ತರು. ಜನರ ಈ ಪ್ರಯತ್ನವನ್ನು ವಿಶ್ವಬ್ಯಾಂಕ್ ಶ್ಲಾಘಿಸಿತು. 1970ರಲ್ಲಿ ಮರಗಳನ್ನು ಅಪ್ಪಿಕೊಳ್ಳುವ ಚಳವಳಿ ಶುರುಮಾಡುವ ಮುನ್ನ, 'ಕ್ವಿಟ್ ಇಂಡಿಯಾ ಚಳವಳಿ'ಯ ಸಮಯದಲ್ಲಿ ಮಾಡಿದ್ದಂತೆ, ಗುತ್ತಿಗೆದಾರರ ವಾಹನಗಳನ್ನು ಸುಟ್ಟು ಹಾಕುವುದು ಇಲ್ಲವೇ ಟಿಂಬರ್ ಸಾಗಿಸುವ ಲಾರಿಗೆ ಅಡ್ಡವಾಗಿ ನೆಲದ ಮೇಲೆ ಗುಂಪಾಗಿ ಮಲಗುವುದು, ಟೈರ್ ಪಂಕ್ಚರ್ ಮಾಡುವುದು ಮುಂತಾದ ಬಲ ಪ್ರದರ್ಶನದ ದಾರಿಯನ್ನೇ ಆಯ್ಕೆ ಮಾಡಿಕೊಂಡಿದ್ದರು. 'ಅದು ಸರಿಯಾದ ಕ್ರಮ ಅಲ್ಲ' ಎಂದು ಏಪ್ರಿಲ್ 1, 1973ರ ದಶೋಲಿ ಗ್ರಾಮ ಸ್ವರಾಜ್ಯ ಸಂಘದ ಸಭೆಯಲ್ಲಿ ತೀರ್ಮಾನವಾದ ನಂತರ 'ಅಪ್ಪಿಕೋ ಚಳವಳಿ' ಶುರುವಾಯಿತು. ಅವರ ಚಳವಳಿಯಲ್ಲಿ ಐದು ಪ್ರಮುಖ ಬೇಡಿಕೆಗಳಿದ್ದವು.



1. ಸ್ಥಳೀಯ ಜನರ ಮೂಲಭೂತ ಅವಶ್ಯಕತೆಗನುಗುಣವಾಗಿ ಅರಣ್ಯದ ಮೇಲಿನ ಸಾಂಪ್ರದಾಯಿಕ ಹಕ್ಕಿನ ಸ್ಥಾಪನೆ.
2. ಕಾಡಿನ ರಕ್ಷಣೆಗೆ ಗ್ರಾಮ ಅರಣ್ಯ ಸಮಿತಿಗಳ ರಚನೆ.
3. ಅರಣ್ಯ ಸಂಬಂಧಿ ಗುಡಿ ಕೈಗಾರಿಕೆಗಳ ಸ್ಥಾಪನೆ ಮತ್ತು ಅದೇ ಅರಣ್ಯದಿಂದ ಕಚ್ಚಾ ವಸ್ತು ಪೂರೈಕೆ.
4. ಬಂಜರು ಭೂಮಿಯ ಹಸಿರೀಕರಣ ಮತ್ತು ಕೃಷೀಕರಣ.
5. ಅರಣ್ಯೀಕರಣದಲ್ಲಿ ಸ್ಥಳೀಯ ಜಾತಿಯ ಮರ–ಗಿಡಗಳಿಗೆ ಆದ್ಯತೆ.

ಹಲವು ಪ್ರಥಮಗಳ 'ನರ್ಮದಾ ಬಚಾವೋ' ಗುಜರಾತ್, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಜಲವಿದ್ಯುತ್ ಮತ್ತು ಆಹಾರ ಉತ್ಪಾದನೆಗಳನ್ನು ಉತ್ತೇಜಿಸಲು ಕೈಗೊಂಡ ಸರ್ದಾರ್ ಸರೋವರ ಯೋಜನೆಯ ವಿರುದ್ಧ ಭಾರತದ ಇತಿಹಾಸದಲ್ಲೇ ಅತಿ ಲಂಬಿತ ಹಾಗೂ ವ್ಯಾಪಕವಾಗಿ ನಡೆದ ಚಳವಳಿ ಇದು. 1312 ಕಿ.ಮೀ. ಉದ್ದ ಹರಿಯುವ ನರ್ಮದಾ ನದಿಗೆ 30 ಬೃಹತ್ ಅಣೆಕಟ್ಟುಗಳು, 135 ಮಧ್ಯಮ, 3000 ಸಣ್ಣ ಡ್ಯಾಂಗಳನ್ನು ಅದರ ಐವತ್ತೊಂದು ಉಪನದಿಗಳಿಗೆ ಅಡ್ಡಲಾಗಿ ನಿರ್ಮಿಸಲು ನೀಲನಕಾಶೆಯೊಂದಿಗೆ 50 ಲಕ್ಷ ಎಕರೆ ಭೂಮಿಗೆ ನೀರು, 1450 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ, 8000 ಹಳ್ಳಿಗಳು ಮತ್ತು 135 ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ 1987ರಲ್ಲಿ ಕೆಲಸ ಪ್ರಾರಂಭವಾಯಿತು. 132 ಮೈಲಿ ಉದ್ದದ ಜಲಾಶಯವು 91,000 ಹೆಕ್ಟೇರ್ ಜಾಗ, 28 ಸಾವಿರ ಹೆಕ್ಟೇರ್ ಕಾಡು ಮುಳುಗಿಸುತ್ತಿತ್ತು; ಅದರ ಕಾಲುವೆಗಳು 2 ಲಕ್ಷ ಎಕರೆ ಪ್ರದೇಶವನ್ನು ಆಕ್ರಮಿಸಿ ಹತ್ತು ಲಕ್ಷ ಜನರನ್ನು ನಿರ್ವಸಿತರನ್ನಾಗಿಸುತ್ತಿತ್ತು.

ನರ್ಮದಾ ಯೋಜನೆಯಿಂದ ನೆಲೆ ಕಳೆದುಕೊಳ್ಳುವವರಿಗೆ ಪುನರ್ವಸತಿ ಕಲ್ಪಿಸಿಕೊಡುವ ಯಾವ ಮಾಹಿತಿಯೂ ಫಲಾನುಭವಿಗಳಿಗೆ ತಲುಪಿರಲಿಲ್ಲ ಮತ್ತು ಅಂತಹ ಯಾವ ಯೋಜನೆಯೂ ಸರ್ಕಾರದ ಬಳಿ ಇರಲಿಲ್ಲ ಎಂದು ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಮತ್ತವರ ಸಹೋದ್ಯೋಗಿಗಳು ಹೋರಾಟಕ್ಕಿಳಿದರು. ನಿರಾಶ್ರಿತರಾಗುವ ಹಳ್ಳಿಗರ ಅಭಿಪ್ರಾಯವನ್ನೂ ಪಡೆಯದೆ ಯೋಜನೆ ರೂಪಿಸಿದ್ದು ಹಲವು ಅನುಮಾನಗಳಿಗೆ ಕಾರಣವಾಗಿತ್ತು.

ನೆಲೆ ಕಳೆದುಕೊಳ್ಳುವವರ ಪರವಾಗಿ ಶುರುವಾದ ಆಂದೋಲನ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಯಿತು. ಸುಂದರಲಾಲ್ ಬಹುಗುಣ, ವಂದನಾ ಶಿವ, ಬಾಬಾ ಆಮ್ಟೆಯಂಥವರು ಪ್ರತಿಭಟನೆಗೆ ಜೊತೆಯಾದುದು ಮೇಧಾ ಪಾಟ್ಕರ್ ತಂಡದ ಬಲ ಹೆಚ್ಚಿಸಿತು. ಸತ್ಯಾಗ್ರಹ, ಜಲ ಸಮರ್ಪಣೆ, ರಾಸ್ತಾ ರೋಕೊ, ಗಾಂವ್‌ಬಂದ್, ರ್‍ಯಾಲಿಗಳು, ಉಪವಾಸ ಸತ್ಯಾಗ್ರಹಗಳನ್ನು ಸಂಘಟಿಸಿ ಯೋಜನೆಯ ವಿರುದ್ಧದ ಹೋರಾಟ ಮೂವತ್ತು ವರ್ಷಗಳವರೆಗೆ ನಡೆಯಿತು. 'ನರ್ಮದಾ ಬಚಾವ್' ಆಂದೋಲನ ಭಾರತದಲ್ಲಿ ಸ್ವಾತಂತ್ರ್ಯಾನಂತರದ ಮೊದಲ ಬೃಹತ್ ಸಾಮಾಜಿಕ ಚಳವಳಿ ಎಂದು ಖ್ಯಾತವಾಯಿತು. ಸಾಮಾಜಿಕ ಚಳವಳಿ ಯಾವ ಸ್ವರೂಪದ್ದಾಗಿರಬೇಕು ಎಂಬ ಪ್ರಥಮ ಪಾಠ ಕಲಿಸಿದ ಚಳವಳಿ ಎಂದೇ ಇತಿಹಾಸದಲ್ಲಿ ದಾಖಲಾಗಿದೆ. ಜನವಿರೋಧಿ ಯೋಜನೆಗಳಿಗೆ ಪ್ರಜ್ಞಾವಂತರು ಹಾಗೂ ಸಮಾಜದ ಇತರೆ ಸಮುದಾಯ ಯಾವ ರೀತಿ ಸ್ಪಂದಿಸಬೇಕು ಎಂಬುದು ನರ್ಮದಾ ಆಂದೋಲನದ ವೇಳೆ ರುಜುವಾತಾಯಿತು. ವಿದ್ಯಾರ್ಥಿಗಳು, ಅಧ್ಯಾಪಕರು, ನ್ಯಾಯವಾದಿಗಳು, ಎನ್‌ಜಿಓಗಳು, ಲೇಖಕರು, ಸಿನಿಮಾ ಕಲಾವಿದರು – ಹೀಗೆ ಸಮಾಜದ ಎಲ್ಲ ಸ್ತರದ ಜನ ಒಟ್ಟಾಗಿ ನಡೆಸಿದ ಹೋರಾಟ ಇದು.

## ದೊಡ್ಡ ಗದ್ದಲದ 'ಸೈಲೆಂಟ್ ವ್ಯಾಲಿ'

ಒಂದು ಸಾವಿರ ಹೂ ಬಿಡುವ ಸಸ್ಯ, 107 ಬಗೆಯ ಆರ್ಕಿಡ್, ನೂರು ಬಗೆಯ ಜರೀಗಿಡ (Fern), 500 ಬಗೆಯ ಚಿಟ್ಟೆ, ಪಾತರಗಿತ್ತಿ, 292 ಬಗೆಯ ಹಕ್ಕಿ ಹಾಗೂ ಇತರ ವನ್ಯ ಮೃಗಗಳ ಆವಾಸವೆನಿಸಿರುವ ಕೇರಳದ ಪಾಲಕ್ಕಾಡ್ ಜಿಲ್ಲೆಯ ಅಕ್ಷತ ನಿತ್ಯ ಹರಿದ್ವರ್ಣ ಕಾಡಿನಲ್ಲಿ 1973ರಲ್ಲಿ ಜಲವಿದ್ಯುತ್ ಯೋಜನೆ ಕೈಗೊಂಡಾಗ ಅದನ್ನು ವಿರೋಧಿಸುವ ಹೋರಾಟ ಮೊದಲಾಯಿತು. ನಿಶ್ಶಬ್ದ ಕಣಿವೆಯ ನೈರುತ್ಯ ಭಾಗದಲ್ಲಿ ಹರಿಯುವ ಕುಂತಿಪುಜ ನದಿಗೆ ಅಡ್ಡಲಾಗಿ ಡ್ಯಾಂ ನಿರ್ಮಿಸುವ ಯೋಜನೆ 1920ರಲ್ಲೇ ಸಿದ್ಧವಾಗಿತ್ತಾದರೂ ಅದು ಪರಿಸರ ಅಸಮತೋಲನಕ್ಕೆ ಕಾರಣವಾಗಬಹುದೆಂದು ಬ್ರಿಟಿಷರು ಸುಮ್ಮನಿದ್ದರು. 1970ರಲ್ಲಿ ಮತ್ತೆ ಇದರ ಪ್ರಸ್ತಾಪವಾದಾಗ 89 ಚದರ ಕಿ.ಮೀ. ವ್ಯಾಪ್ತಿಯ ಕಾಡಿನ 8.3 ಚ.ಕಿ.ಮೀ.ನಷ್ಟು ದಟ್ಟ ಅರಣ್ಯ ಮುಳುಗಡೆಯಾಗುತ್ತದೆಂದು ಗೊತ್ತಾಗಿ ಅದನ್ನು ಕೈಬಿಡುವಂತೆ ಕೇರಳದಾದ್ಯಂತ ಪ್ರತಿಭಟನೆ ವ್ಯಕ್ತವಾಯಿತು.

ಜಲ ವಿದ್ಯುತ್ ಯೋಜನೆಯಿಂದ ಏನೆಲ್ಲ ಧ್ವಂಸವಾಗಬಹುದು ಎಂಬುದು 'ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್'ನ ಸಂಚಿಕೆಯಲ್ಲಿ ಪ್ರಕಟವಾದಾಗ, ಮುಂಬೈನ 'ನ್ಯಾಚುರಲ್ ಹಿಸ್ಟರಿ ಸೊಸೈಟಿ', 'ಫ್ರೆಂಡ್ಸ್ ಫಾರ್‌ದ ಟ್ರೀ ಸೊಸೈಟಿ', 'ಡಬ್ಲ್ಯುಡಬ್ಲ್ಯು ಎಫ್ – ನೇಚರ್ ಇಂಡಿಯಾ' ಸಂಘಟನೆಗಳು ಬೆಂಬಲ ನೀಡಿದವು. ಕೇರಳ